ಗರಿಷ್ಠ 39°c | ಕನಿಷ್ಠ 23°c

ಕನ್ನಡಪ್ರಭ

ಗುರುವಾರ 7.05.2026

ಸುದ್ದಿ ಸಿಂಚನ

ಮಾತಾಜಿ ಕುಶಲೋಪರಿ ವಿಚಾರಿಸಿದ ಶ್ರೀಗಳು



ಇಳಕಲ್ಲ: ಶ್ರವಣಬೆಳಗೋಳದಿಂದ ದೆಹಲಿಗೆ ಮೂರು ಗಾಲಿಯ ಬೈಸಿಕಲ್ ಮೇಲೆ, ಸುಡು ಬಿಸಿಲಿನಲ್ಲಿಯೂ ಪ್ರಯಾಣ ಬೆಳೆಸುತ್ತಿರುವ ಜೈನ ಸಮಾಜದ ಉತ್ತರ ಪ್ರದೇಶದ ವೈರಾಗ್ಯ ಯೋಗಿನಿ ಆರಿಕಾ ಮಾತಾ 105 ಚಂದ್ರಮತಿ ಮಾತಾಜಿ ಅವರು ಇಳಕಲ್ಲ ಮಾರ್ಗವಾಗಿ ಹೋಗುವಾಗ ಸಮಾಜದ ಅಧ್ಯಕ್ಷ ಧನಪಾಲ ಪಾಟೀಲ ಇವರ ಮನೆಯಲ್ಲಿ ಆಹಾರ ಸೇವಿಸಿದರು.
ಜೋಶಿಗಲ್ಲಿಯ ರಸ್ತೆಯಲ್ಲಿ ಚದ್ರಮತಿ ಮಾತಾಜಿ ಅವರು ವಯೋವೃದ್ಧರಾಗಿಯೂ ಇಂತಹ ಬಿಸಿಲಿನಲ್ಲಿ ಒಬ್ಬರೆ ಪ್ರಯಾಣ ಮಾಡುತ್ತಿರುವುದನ್ನು ಕಂಡ ಡಾ. ಗುರುಮಹಾಂತ ಶ್ರೀಗಳು ಆಶ್ಚರ್ಯಚಕಿತರಾಗಿ ತಮ್ಮ ಕಾರಿನಿಂದ ಇಳಿದು ಮಾತಾಜಿಯವರನ್ನು ಕಂಡು ಆರೋಗ್ಯ ವಿಚಾರಿಸಿದರು. ಜತೆಗೆ ಅವರ ಈ ಪ್ರಯಾಣದ ಬಗ್ಗೆ ವಿಚಾರಿಸಿ ತಮ್ಮ ಶ್ರೀಮಠಕ್ಕೆ ಆಗಮಿಸಲು ವಿನಂತಿಸಿದರು. ಬೈಸಿಕಲ್ಲಿನಲ್ಲಿ ಸಾವಿರಾರು ಕಿಮೀ. ದೂರವನ್ನು ಬಿಸಿಲು, ಮಳೆ, ಗಾಳಿ ತೊಂದರೆಗಳನ್ನು ಲೆಕ್ಕಿಸದೆ ಪ್ರಯಾಣಿಸುತ್ತಿರುವ ತಮಗೆ ಆ ದೇವರು ತಮಗೆ ಆರೋಗ್ಯ ಹಾಗೂ ಸುಖವಾದ ಪ್ರವಾಸ ನೀಡಲಿ ಎಂದು ಶುಭ ಹಾರೈಸಿ ಬೀಳ್ಕೊಟ್ಟರು.

ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ ಹಿರೇಮನಿ ಇನ್ನಿಲ್ಲ

ಬಾಗಲಕೋಟೆ: ಕೇಂದ್ರ ಸರ್ಕಾರದ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ, ಎಸ್‌ಐಆರ್‌ರಾಜ್ಯ ಸಂಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದ ಎಬಿವಿಪಿಯ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ನಗರದ ಜಗದೀಶ ಹಿರೇಮನಿ ಅವರು ಹೃದಯಾಘಾತದಿಂದ



ನಿಧನರಾಗಿದ್ದಾರೆ. ಬಾಗಲಕೋಟೆ ನವನಗರದ ಸೆಕ್ಟರ್‌ನಂ.33ರ ನಿವಾಸಿಯಾದ ಜಗದೀಶ ಹಿರೇಮನಿ ಅವರಿಗೆ 55 ವರ್ಷ ವಯಸ್ಸಾಗಿತ್ತು. ಮೃತರಿಗೆ ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವಿದೆ. ಮೇ 7 ರಂದು 12 ಗಂಟೆಗೆ ಬೈಪಾಸ್ ರಸ್ತೆಯಲ್ಲಿರುವ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ದಿವಂಗತರು ಶಾಲಾ ಅವಧಿಯಿಂದಲೇ ಅಖಿಲ ಭಾರತೀಯ ವಿದ್ಯಾರ್ಥಿಪರಿಷತ್ನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಎ.ಬಿ.ವಿ.ಪಿ ಪೂರ್ಣಾವಧಿ ಕಾರ್ಯರ್ತರಾಗಿ, ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರೂ ಆಗಿ ಸೇವೆ ಸಲ್ಲಿಸಿದ್ದರು. ಅವರು ಎಸ್.ಐ.ಆರ್‌ರಾಜ್ಯ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದರು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದರು. ಪಕ್ಷಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಸದಾ ಕ್ರಿಯಾಶೀಲವಾಗಿ ಇರುತ್ತಿದ್ದರು ಎಂಬುವುದನ್ನು ಸ್ಮರಿಸಬಹುದು.

ಜಲಾಶಯ ಮಟ್ಟ

ಆಲಮಟ್ಟಿ
- ಗರಿಷ್ಠ ಮಟ್ಟ..................519.60ಮೀ.
- ಇಂದಿನ ಮಟ್ಟ.................509.52ಮೀ.
- ಒಳಹರಿವು.......................ಇಲ್ಲ
- ಹೊರಹರಿವು..................3,727 ಕ್ಯು

ಘಟಪ್ರಭಾ
- ಗರಿಷ್ಠ ಮಟ್ಟ.................2175.00ಮೀ.
- ಇಂದಿನ ಮಟ್ಟ.............2110.850ಮೀ.
- ಒಳಹರಿವು.......................ಇಲ್ಲ
- ಹೊರಹರಿವು....................143ಕ್ಯು



ಬನಹಟ್ಟಿಯ ಕೆಎಂಎಫ್‌ಡಿಡಿಎಲ್‌ನಲ್ಲಿ ಕಾರ್ಮಿಕ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ಹಿರಿಯ ನ್ಯಾಯಾಧೀಶ ಆಶಪ್ಪ ಸಣಮನಿ ಉದ್ಘಾಟಿಸಿದರು.

ಕಾರ್ಮಿಕರಿಗೆ ಕಾನೂನು ಅರಿವು ಅಗತ್ಯ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಕಾರ್ಮಿಕರಿಗೆ ಕಾನೂನು ಅರಿವು ಇದ್ದಾಗ ಮಾತ್ರ ಸರ್ಕಾರ ಹಾಗೂ ಇಲಾಖೆಯಿಂದ ದೊರೆಯಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ ಎಂದು ಹಿರಿಯ ನ್ಯಾಯಾಧೀಶ ಆಶಪ್ಪ ಸಣಮನಿ ಹೇಳಿದರು.

ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ಬುಧವಾರ ಬನಹಟ್ಟಿಯ ಕೆಎಂಎಫ್‌ಡಿಡಿಎಲ್‌ನ ಡೆಂಪೋಡೇರಿ ಆವರಣದಲ್ಲಿ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಮಿಕರ ಹಿತದೃಷ್ಟಿಯಿಂದ ಸರ್ಕಾರ ಕಾರ್ಮಿಕರ ಇಲಾಖೆ ಸ್ಥಾಪಿಸಿದ್ದು, ಕಾರ್ಮಿಕರ ಮೇಲಾಗುತ್ತಿರುವ ದೌರ್ಜನ್ಯ ತಡೆಯುವುದು ಇಲಾಖೆ ಕರ್ತವ್ಯ. ಕಾರ್ಮಿಕರು ವೇತನ ಹಾಗೂ ಸೌಲಭ್ಯ ವಂಚಿತರಾದಲ್ಲಿ ಇಲಾಖೆಗೆ ಸಂಪರ್ಕಿಸಬೇಕು ಎಂದರು. ಕಾರ್ಮಿಕರಲ್ಲಿ ಲಿಂಗ ತಾರತಮ್ಯ ಮಾಡಲು ಅವಕಾಶವಿಲ್ಲ. ಮಹಿಳಾ ಕಾರ್ಮಿಕರಿಗೆ ಯಾರಾದರೂ ಕಿರುಕುಳ ನೀಡಿದರೆ ಮಹಿಳಾ ಸಹಾಯವಾಣಿಗೆ ಸಂಪರ್ಕಿಸಿ, ಕಾನೂನು ನೆರವು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಸಾಗರ ಕುಲಕರ್ಣಿ ಮಾತನಾಡಿ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಕಿರುಕುಳ ಸೇರಿದಂತೆ ಮುಂತಾದ ಸಮಸ್ಯೆಗಳಿದ್ದಲ್ಲಿ ಕಾನೂನು ಸಮಿತಿಗೆ ತಿಳಿಸುವ ಮೂಲಕ ಉಚಿತ ಸಲಹೆ ಪಡೆಯಬಹುದು ಎಂದರು. ಕೆಎಂಎಫ್‌ಡಿಡಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಸಿದ್ದೇಗೌಡ ಮಾತನಾಡಿದರು. ವಕೀಲರ ಸಂಘದ ಕಾರ್ಯದರ್ಶಿ ರವೀಂದ್ರ ಸಂಪಗಾಂವಿ, ಆರ್.ಜೆ.ಶಹಾ, ವರ್ಧಮಾನ ಕೋರಿ, ಉಪನ್ಯಾಸ ನೀಡಿದರು.

ಹರ್ಷವರ್ಧನ ಪಟವರ್ಧನ, ಕೆ.ಜಿ. ಸಾಲಗುಡೆ, ವಿ.ಬಿ.ಖೇಮನ್ನವರ, ಎಂ.ಬಿ. ದರೂರ, ಎಸ್.ಬಿ.ಜಿಡ್ಡಿಮನಿ ಇದ್ದರು.

ಪ್ರೊ.ಕೊಣ್ಣೂರವರಿಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ

ರಬಕವಿ-ಬನಹಟ್ಟಿ: ಗ್ರಾಮೀಣ ಭಾಗದಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಶಿಕ್ಷಣದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಕ್ರಾಂತಿಗೆ ಕಾರಣಿಕರಾದ ಕೊಣ್ಣೂರ ಗ್ರುಫ್ ಆಫ್



ಇನ್‌ಸ್ಟಿಟ್ಯೂಟಿನ ಸಂಸ್ಥಾಪಕ ಪ್ರಾಚಾರ್ಯ ಪ್ರೊ.ಬಸವರಾಜ ಕೊಣ್ಣೂರವರಿಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿ ಸಂದಿದೆ. ಮೇ 7 ರಂದು ಬೆಂಗಳೂರಿನ ಕೆ.ಜಿ.ರೋಡ್‌ನ ಸರ್. ಎಂ.ವಿ.ಆಡಿಟೋರಿಯಂನಲ್ಲಿ ಕರ್ನಾಟಕ ಘನವೆತ್ತ ರಾಜ್ಯಪಾಲರಾದ ಥಾವರ್‌ಚಂದ ಗೆಹ್ಲೋಟ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ ಪುರಸ್ಕೃತರಾದ ಪ್ರೊ.ಬಸವರಾಜ ಕೊಣ್ಣೂರ ಈ ಗೌರವ ನನ್ನ ಸಂಸ್ಥೆಯ ಎಲ್ಲ ಉಪನ್ಯಾಸಕರು, ವಿದ್ಯಾರ್ಥಿಗಳ ಪರಿಶ್ರಮದ ಫಲ ಎಂದಿದ್ದಾರೆ.

ನಾಡು, ನುಡಿ, ಸಾಹಿತ್ಯ ಕೃಷಿ ಪ್ರಗತಿಗೆ ಕಸಾಪ ಕೊಡುಗೆ ಪ್ರಶಂಸನಾರ್ಹ

ಕಸಾಪ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮೃತ್ಯುಂಜಯ ರಾಮದುರ್ಗ ಮೆಚ್ಚುಗೆ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಕನ್ನಡ ನಾಡು, ನುಡಿಗಾಗಿ, ಕನ್ನಡಿಗರಲ್ಲಿ ಭಾಷಾಭಿಮಾನ ಬೆಳೆಸಲು ನಾಡು, ನುಡಿ ಏಳಿಗೆಗೆ ಸಾಹಿತ್ಯ ಕೃಷಿ ಬೆಳವಣಿಗೆಗೆ ಕಸಾಪ ಕೊಡುಗೆ ಪ್ರಶಂಸಾರ್ಹ ಎಂದು ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ ರಬಕವಿ-ಬನಹಟ್ಟಿ ತಾಲೂಕು ಘಟಕದ ಅಧ್ಯಕ್ಷ ಮೃತ್ಯುಂಜಯ ರಾಮದುರ್ಗ ಹೇಳಿದರು.

ರಬಕವಿಯ ಶ್ರೀಘಟ್ಟಗಿ ಬಸವೇಶ್ವರ ದೇವಸ್ಥಾನದ ಸಭಾಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಜಿಲ್ಲಾ ಘಟಕ ಬಾಗಲಕೋಟೆ, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ರಬಕವಿ-ಬನಹಟ್ಟಿ ವಲಯ ಮಹಾಲಿಂಗಪುರವರು ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡಕ್ಕಾಗಿ ಹಿರಿಯರು ಮಾಡಿದ ಹೋರಾಟ, ತ್ಯಾಗ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಸದಾ ಸ್ಮರಿಸಬೇಕು ಎಂದರು.

ಕರ್ನಾಟಕದ ಗಡಿಯಲ್ಲಿ ನಮ್ಮ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಗಟ್ಟಿಗೊಳಿಸಲು ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರ ಮತ್ತು ಆರ್ಥಿಕ ಸೌಲಭ್ಯವನ್ನು ಸರ್ಕಾರ ಕಲ್ಪಿಸಬೇಕು ಎಂದರು.

ಹಿರಿಯ ಸಾಹಿತಿ ಶಿವಾನಂದ ದಾಶಾಳ ಅವರು ಕಸಾಪ ನಡೆದು ಬಂದ ದಾರಿ ಕುರಿತು ಉಪನ್ಯಾಸ ನೀಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಧ್ಯೇಯೋದ್ದೇಶಗಳನ್ನು ಪ್ರತಿಯೊಬ್ಬ ಕನ್ನಡಿಗನಿಗೆ ಮನವರಿಕೆ ಮಾಡಿಕೊಡುವಲ್ಲಿ ಕಸಾಪ ನಿರಂತರ ಕಾರ್ಯತತ್ಪರವಾಗಿದೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲಿ ಮಂಡಿಸಲಾಗುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಸರ್ಕಾರ ಕನ್ನಡಿಗರ ಭಾವನೆಗಳಿಗೆ ಸ್ಪಂದಿಸಬೇಕು ಎಂದರು. ಕೆಂದರು. ಕಸಾಪ ಗ್ರಾಮೀಣ ಭಾಗದಲ್ಲಿಯೂ ಸಮ್ಮೇಳನಗಳನ್ನು ಆಯೋಜಿಸಿ ಕನ್ನಡ ಭಾಷೆ, ನೆಲ, ಜಲ, ಸಂಸ್ಕೃತಿ ಕುರಿತು ಜಾಗೃತಿ ಮೂಡಿಸುತ್ತ ಬಂದಿದೆ. ರಬಕವಿ-ಬನಹಟ್ಟಿ ತಾಲೂಕು ಕಸಾಪ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬರುತ್ತಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.



ರಬಕವಿಯ ಶ್ರೀಘಟ್ಟಗಿ ಬಸವೇಶ್ವರ ದೇವಸ್ಥಾನ ಸಭಾಭವನದಲ್ಲಿ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆಗೆ ಜ್ಯೋತಿ ಬೆಳಗಿಸಿ ಮೃತ್ಯುಂಜಯ ರಾಮದುರ್ಗ ಚಾಲನೆ ನೀಡಿದರು.

ತಾಲೂಕು ಕಸಾಪ ಅಧ್ಯಕ್ಷ ಕಸಾಪ ಇತಿಹಾಸ ವಿವರಿಸಿ, ಪ್ರತಿಯೊಬ್ಬಕನ್ನಡಿಗಕಸಾಪಸದಸ್ಯತ್ವಪಡೆದುಕೊಳ್ಳಬೇಕು ಎಂದರು.

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬನಹಟ್ಟಿಯ ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಎಸ್ಸೆಸ್ಸೆಲ್ಸಿಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಸುಶಾಂತ ಶ್ರೀಶೈಲ ಬುರ್ಲಿ ಅವರನ್ನು ಸನ್ಮಾನಿಸಲಾಯಿತು. ಬಿ.ಎಂ.ಮಟ್ಟಿಕಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರಪ್ಪ ಪೂಜಾರಿ, ಕಸಾಪ ಜಿಲ್ಲಾ ಘಟಕದ ಮಹಿಳಾ ಪ್ರತಿನಿಧಿ ದಾಕ್ಷಾಯಣಿ ಮಂಡಿ, ತೇರದಾಳ ತಾಲೂಕು ಕಸಾಪ ಅಧ್ಯಕ್ಷ ಗಂಗಾಧರ ಮೋಪಗಾರ, ಮಹಾಲಿಂಗಪುರ ವಲಯ ಅಧ್ಯಕ್ಷ ಬಸವರಾಜ ಮೇಟಿ ಇದ್ದರು.

ಅನಸೂಯಾ ಹಿರೇಮಠ ಪ್ರಾರ್ಥಿಸಿದರು. ಚಂದ್ರಪ್ರಭಾ ಬಾಗಲಕೋಟ ಸ್ವಾಗತಿಸಿದರು. ಡಾ. ಚಂದ್ರಕಾಂತ ಹೊಸೂರ, ಶ್ರೀಶೈಲ ಬುರ್ಲಿ ನಿರೂಪಿಸಿದರು. ದಾನಪ್ಪ ಆಸಂಗಿ ವಂದಿಸಿದರು.

ಯಶವಂತ ವಾಜಂತ್ರಿ, ಮಹಾದೇವ ಕವಿಶೆಟ್ಟಿ, ಎಸ್. ಎಸ್. ಹಿರೇಮಠ, ಈರಯ್ಯ ಹಿರೇಮಠ, ಚಿದಾನಂದ ಸೊಲ್ಲಾಪೂರ, ಶರತ್ ಜಂಬಗಿ, ಮಹಾಶಾಂತ ಶೆಟ್ಟಿ, ಈರಪ್ಪ ಮನ್ನಿ, ಎಂ.ಆರ್. ಕುಂಬಾರ, ಶೈಲಾ ಮಿರ್ಜಿ ಇನ್ನಿತರರು ಪಾಲ್ಗೊಂಡಿದ್ದರು.

ಸಿವಿಲ್ ಜಡ್ಜ್ ಪರೀಕ್ಷೆಯ ತಯಾರಿಗೆ ತರಬೇತಿ

ನ್ಯಾಯವಾದಿ ಸಂಘದ ಅಧ್ಯಕ್ಷ ಎ.ಪಿ.ಕುಲಕರ್ಣಿ



• **ಕನ್ನಡಪ್ರಭ ವಾರ್ತೆ** ಜಮಖಂಡಿ

ಉತ್ತರ ಕರ್ನಾಟಕದ ದಿವಾಣಿ ನ್ಯಾಯಾಧೀಶರ (ಸಿವಿಲ್ ಜಡ್ಜ್)ಸಂಖ್ಯೆ ಕಡಿಮೆಯಾಗಿದೆ. ಬಹಳಷ್ಟು ಜನ ಕಿರಿಯ ವಕೀಲರು ಪರೀಕ್ಷೆ ಬರೆಯುತ್ತಿದ್ದಾರಾದರೂ ಫಲಿತಾಂಶ ಸಿಕ್ಕುತ್ತಿಲ್ಲ. ಆದ್ದರಿಂದ ಕಿರಿಯ ನ್ಯಾಯವಾದಿಗಳಿಗೆ ಕಾರ್ಯಾಗಾರಗಳನ್ನು ಏರ್ಪಡಿಸಿ ಪರೀಕ್ಷೆಯ ತಯಾರಿ ಕುರಿತು ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ನಗರ ನ್ಯಾಯವಾದಿಗಳ ಸಂಘದ ನೂತನ ಅಧ್ಯಕ್ಷ ಎ.ಪಿ.ಕುಲಕರ್ಣಿ ಹೇಳಿದರು.

ವಕೀಲರ ಭವನದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕೀಲರ ಗ್ರಂಥಾಲಯ ಸುಧಾರಣೆಯಾಗಬೇಕಿದೆ. ಅದಕ್ಕಾಗಿ ಸಂಘದಿಂದ ಪ್ರಯತ್ನ ನಡೆಸುವ ಉದ್ದೇಶ ಹೊಂದಲಾಗಿದೆ. ಜಮಖಂಡಿ ನಗರದ ಕೋರ್ಟ್‌ನ ಕಟ್ಟಡ ಶಿಥಿಲವಾಗಿದೆ. ಸರ್ಕಾರ ಹೊಸ ಕಟ್ಟಡ ನಿರ್ಮಾಣಕ್ಕೆ ಅನುಮತಿಯನ್ನು ನೀಡಿದೆ. ಆದರೆ, ಸದ್ಯದ ಕೋರ್ಟ್‌ನ ಸ್ಥಳಾಂತರವಾಗಬೇಕಿದೆ. ವಕೀಲರ ಸಂಘ ನ್ಯಾಯಾಲಯದ ಸ್ಥಳಾಂತರ ಹಾಗೂ ಹೊಸ ಕಟ್ಟಡದ ನಿರ್ಮಾಣಕ್ಕೆ ಶ್ರಮ ವಹಿಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕುತ್ತಿದ್ದ ಕೆಲ ವಕೀಲರ ಸಂಘಕ್ಕೆ ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದ್ದು, ವಕೀಲರ ಸಂಘದ ಕೆಲಸವೇನು ಎಂದು ಪ್ರಶ್ನಿಸಿದೆ. ಈ ಹಿನ್ನೆಲೆಯಲ್ಲಿ ವಕೀಲರ ಸಂಘದ ಇತಿ, ಮಿತಿಗಳೊಳಗೆ ಕಾರ್ಯನಿರ್ವಹಿಸಲು ಸಂಘದ ಎಲ್ಲ ಪದಾಧಿಕಾರಿಗಳು ತೀರ್ಮಾನಿಸಿದ್ದಾರೆ. ವಕೀಲರ ಸಂಘದ ವತಿಯಿಂದ ನಡೆಯುವ ಎಲ್ಲ ಸಮಾಜ ಮುಖಿಕಾರ್ಯಗಳನ್ನು ನಡೆಸುವುದು ಹಾಗೂ ಸಮಸ್ಯೆಗಳ ಪರಿಹಾರ ಮಾರ್ಗಗಳನ್ನು ಕಂಡು ಕೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯದರ್ಶಿ ವೈಕೆ.ಕಡಪಟ್ಟಿ ಮಾತನಾಡಿ, ಇತ್ತೀಚೆಗೆ ನಡೆದ ವಕೀಲರ ಸಂಘದ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ.30 ಮೀಸಲಾತಿ ನೀಡಲಾಗಿದ್ದು, 11 ಜನ ಪದಾಧಿಕಾರಿಗಳ ಪೈಕಿ ಮೂವರು ಮಹಿಳೆಯರಿದ್ದಾರೆ. ನ್ಯಾಯಾಲಯದ ಆವರಣದಲ್ಲಿ ಪಾರ್ಕಿಂಗ್ ಸಮಸ್ಯೆ ಹಾಗೂ ವಿದ್ಯುತ್‌ನ ಸಮಸ್ಯೆಯ ಪರಿಹಾರಕ್ಕೆ ಕ್ರಮ ಜರುಗಿಸಲಾಗುವುದು. ಸೋಲಾರ ಅಳವಡಿಕೆಗೆ ಚಿಂತನೆ ನಡೆದಿದೆ ಎಂದು ವಿವರಿಸಿದರು. ನ್ಯಾಯವಾದಿ ಆರ್.ಆರ್. ಕರೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಾಧ್ಯಕ್ಷೆ ವಿಜಯಲಕ್ಷ್ಮೀ ಭಟ್, ಎಸ್.ಎ.ಅಂಬಿ, ಆರ್.ಎಂ.ಝುಂಡೆ, ಎಸ್.ಕೆ.ದಳವಾಯಿ, ಎಸ್.ಕೆ.ಗೌಡಪ್ಪನವರ, ಯು.ಎಸ್.ಚರಕಿ, ಜೆ.ಆರ್.ಮಾಳಿ ಇದ್ದರು ವಿ.ಜಿ.ಅಳ್ಳಿಕಟ್ಟಿ ವಂದಿಸಿದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ವಿಶೇಷ ಬದ್ಧತೆ


ನಿಯಮದಂತೆ ಬಾಲ ಕಾರ್ಮಿಕರನ್ನು ಸೇರಿಸಿಕೊಳ್ಳಬಾರದು: ತಹಸೀಲ್ದಾರ್ ಗಿರೀಶ ಸ್ವಾದಿ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಇಚ್ಛಾಶಕ್ತಿಯ ಅವಶ್ಯಕತೆಯಿದ್ದು, ಪ್ರತಿಯೊಬ್ಬರೂ ಬದ್ಧತೆಯಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ ತಾಲೂಕಿನಾದ್ಯಂತ ಎಲ್ಲ ವ್ಯಾಪಾರಸ್ಥರು ಇದಕ್ಕನುಗುಣವಾಗಿ ನಿಯಮದಂತೆ ಬಾಲ ಕಾರ್ಮಿಕರನ್ನು ಸೇರಿಸಿಕೊಳ್ಳಬಾರದು ಎಂದು ತಹಸೀಲ್ದಾರ್ ಗಿರೀಶ ಸ್ವಾದಿ ಸೂಚಿಸಿದರು.

ತಹಸೀಲ್ದಾರ್ ಕಾರ್ಯಾಲಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡದ ನೇತೃತ್ವದಲ್ಲಿ ಬುಧವಾರ ಬೀದಿಗಿಳಿದು ಪ್ರತಿಯೊಂದು ವ್ಯಾಪಾರಸ್ಥರಿಗೆ ಸಂದೇಶ ರವಾನೆಯೊಂದಿಗೆ ಕೆಲ ಅಂಗಡಿಗಳಲ್ಲಿ ಬಾಲ ಕಾರ್ಮಿಕರ ಬಗ್ಗೆ ವಿಚಾರಣೆ ನಂತರ ಮಾತನಾಡಿದ ಅವರು, ಮಕ್ಕಳು ದೇಶದ ಆಸ್ತಿ. ಅವರ ಭವಿಷ್ಯಕ್ಕಾಗಿ ಉತ್ತಮ ಶಿಕ್ಷಣ ನೀಡಬೇಕೆಂಬ ಮನಸ್ಥಿತಿ ಎಲ್ಲರಲ್ಲಿ ಬರಬೇಕು. ಅದರಲ್ಲೂ ಬಾಲ ಕಾರ್ಮಿಕರನ್ನು ಕಾನೂನು ಮೀರಿ ಕೆಲಸಕ್ಕೆ ಇರಿಸಿಕೊಳ್ಳದೇ ಅಂಥವರ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

6 ರಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಲು ಸರ್ಕಾರ ಕಾನೂನು ಜಾರಿಗೊಳಿಸಿದ್ದು, ಈ ನಿಬಂಧನೆಯಿಂದ ತಾಲೂಕಿನಾದ್ಯಂತ ಎಲ್ಲಿಯೂ ಬಾಲ ಕಾರ್ಮಿಕರು ಕೆಲಸ ಮಾಡದಂತೆ ಪಾಲಕರು ಹಾಗೂ ವ್ಯಾಪಾರಸ್ಥರು ನಿಗಾ ವಹಿಸಬೇಕು. ಒಂದು ವೇಳೆ ಅಂಥ ಘಟನೆ ಕಂಡು ಬಂದಲ್ಲಿ 2 ವರ್ಷ ಜೈಲು ಶಿಕ್ಷೆ ಹಾಗೂ 20 ರಿಂದ50ಸಾವಿರರೂ.ಗಳವರೆಗೆದಂಡವಿದಿಸಲಾಗುತ್ತದೆ. ಕಾನೂನು ಕ್ರಮಕ್ಕೆ ಅವಕಾಶ ನೀಡದೆ ಬಾಲ ಕಾರ್ಮಿಕ ಪದ್ಧತಿ ಸಂಪೂರ್ಣ ನಿರ್ಮೂಲನೆಗೆ ಜನತೆ ಸಹಕರಿಸಬೇಕೆಂದು ಸ್ವಾದಿ ಹೇಳಿದರು.



ಕಾರ್ಮಿಕ ಇಲಾಖೆ ಯೋಜನಾಧಿಕಾರಿ ಸುಧಾಕರ ಬಡಿಗೇರ, ಕಾರ್ಮಿಕ ನಿರೀಕ್ಷಕ ರಮೇಶ ವಂಗಿ, ಸಿಆರ್‌ಪಿ ಜಗದೀಶ ಕುಳ್ಳೊಳ್ಳಿ, ಹಿಂದುಳಿದ ವರ್ಗ ಇಲಾಖೆ ಅಧಿಕಾರಿ ಮಹಾಬಲ ಜುಂಜರವಾಡ, ತಾಲೂಕು ಆರೋಗ್ಯಾಧಿಕಾರಿ ಅಪ್ಪಾಜಿ ಹೂಗಾರ, ನಗರಸಭೆ ಪರಿಸರ ವಿಭಾಗದ ಶೋಭಾ ಹೊಸಮನಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುಭದ್ರಾ ಮಹಾಜನ್ ಸೇರಿದಂತೆ ಅನೇಕ ಅಧಿಕಾರಿಗಳ ತಂಡ ಭಾಗವಹಿಸಿತ್ತು.

8ರಂದು ಉದ್ಯೋಗ ಮೇಳ

ಬಾಗಲಕೋಟೆ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮೇ 8 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ಸದರಿ ನೇರ ಸಂದರ್ಶನದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸಿ ಹಲವಾರು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ನೇರ ಸಂದರ್ಶನದಲ್ಲಿ 19 ರಿಂದ 35 ವಯೋಮಿತಿಯಲ್ಲಿರುವ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ ಹಾಗೂ ಪದವೀಧರರು ಭಾಗವಹಿಸಬಹುದಾಗಿದೆ. ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಬಯೋಡೆಟಾ ಮತ್ತು ಮೂಲ ಅಂಕ ಪಟ್ಟಿಗಳ ಝರಾಕ್ಸ್ ಪ್ರತಿಗಳೊಂದಿಗೆ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಲು ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235337ಗೆ ಸಂಪರ್ಕಿಸಬಹುದಾಗಿದೆ.

ತೀರ್ಮಾನ... ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ

ತೇರದಾಳದಿಂದ 5 ಸಾವಿರ ಜನ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭಕ್ಕೆ ತೇರದಾಳ ವಿಧಾನಸಭಾ ಕ್ಷೇತ್ರದ 5 ಸಾವಿರ ಅಭಿಮಾನಿಗಳು ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಶಾಸಕರ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಕ್ಷಿಣ ಭಾರತದಲ್ಲಿ ಕಮಲವನ್ನು ಅರಳಿಸಿದ ಧೀಮಂತ, ರೈತ ಹಾಗೂ ನೇಕಾರ ನಾಯಕ ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ 50 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಸಂಸದ ಗೋವಿಂದ ಕಾರಜೋಳ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ತೇರದಾಳ ಕ್ಷೇತ್ರದಿಂದ 5 ಸಾವಿರ ಜನ ಭಾಗವಹಿಸಲಿದ್ದಾರೆ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿವಿಧ ರಾಜ್ಯಗಳ ನಾಯಕರು ಹಾಗೂ ಮಠಾಧೀಶರು ಭಾಗವಹಿಸಲಿದ್ದಾರೆ. ಯಡಿಯೂರಪ್ಪ ಅವರು ತಮ್ಮ ಅಧಿಕಾರವಧಿಯಲ್ಲಿ ಜನಸಾಮಾನ್ಯರ ಹಾಗೂ ರೈತರ ಬದುಕು ಸುಧಾರಣೆಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು ಶ್ಲಾಘಿಸಿದರು.



ಬನಹಟ್ಟಿಯ ಬಿಜೆಪಿ ಕಾರ್ಯಾಲಯದಲ್ಲಿ ಯಡಿಯೂರಪ್ಪ ಅಭಿಮಾನೋತ್ಸವ ಕುರಿತು ನಡೆದ ಸಭೆಯಲ್ಲಿ ತೇರದಾಳ ಶಾಸಕ ಸಿದ್ದು ಸವದಿ ಮಾತನಾಡಿದರು.

ಈ ವೇಳೆ ನಗರ ಬ್ಲಾಕ್ ಅಧ್ಯಕ್ಷ ಶ್ರೀಶೈಲ ಬೀಳಗಿ, ಪ್ರವೀಣ ನಾಡಗೌಡ, ಸುರೇಶ ಅಕ್ಕಿವಾಟ, ಬಾಬಾಗೌಡ ಪಾಟೀಲ, ಮಹಾವೀರ ಕೊಕಟನೂರ, ರಾಮಣ್ಣ ಹಿಡಕಲ್, ಪ್ರಭು ಪೂಜಾರಿ, ಶಿವಾನಂದ ಗಾಯಕವಾಡ, ಸಂಜಯ ತೆಗ್ಗಿ, ಸವಿತಾ ಹೊಸೂರ, ಸುವರ್ಣಾ ಕೊಪ್ಪದ, ವಿದ್ಯಾ ಪ್ರವೀಣ ದಭಾಡಿ, ಲಿಂಗರಾಜ ನಾಯಕ, ಪಿ.ಜಿ. ಕಾಖಂಡಕಿ, ಅಶೋಕ ರಾವಳ, ಶಿವು ಕಾಗಿ, ಶಿವಾನಂದ ಬುದ್ನಿ, ಪ್ರಭಾಕರ ಮೊಳೇದ, ಈಶ್ವರ ಕಾಡದೇವರ, ಈರಯ್ಯ ಪರಾಳಮಠ ಸೇರಿದಂತೆ ಅನೇಕರಿದ್ದರು.

ಸನ್ಮಾನ... ವಿಕಲಚೇತನ ಮಕ್ಕಳಿಗೆ ಸನ್ಮಾನದಲ್ಲಿ ಬಿಇಒ ಕೇಶವ ವಾಮನ

ವಿಕಲಚೇತನರಿಗೆ ಪ್ರೋತ್ಸಾಹ ಅಗತ್ಯ

• **ಕನ್ನಡಪ್ರಭ ವಾರ್ತೆ** ಗುಳೇದಗುಡ್ಡ

ಸಾಮಾನ್ಯ ಮಕ್ಕಳ ಜೊತೆಗೆ ವಿಕಲಚೇತನ ಮಕ್ಕಳು ಹೆಚ್ಚಿನ ಅಂಕ ಪಡೆಯುವ ಮೂಲಕ ಸಾಧನೆ ಮಾಡಿದ್ದು, ಇತರರಿಗೆ ಮಾದರಿಯಾಗಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಹೇಳಿದರು.

ನಗರದ ಬಾಲಕೀಯರ ಪ.ಪೂ. ಕಾಲೇಜು (ಪ್ರೌಢಶಾಲೆ ವಿಭಾಗ)ದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕಿನ ಹೆಚ್ಚು ಅಂಕ ಪಡೆದ ವಿಕಲಚೇತನ ಮಕ್ಕಳಿಗೆ ಸನ್ಮಾನ ಮಾಡಿ ಮಾತನಾಡಿದರು. ಇದೇ ವೇಳೆ ವಿಕಲಚೇತನ ಮಕ್ಕಳಾದ ತೆರೆಸ್ಸಾ ಮಳ್ಳಿ (ದೈಹಿಕ ವಿಕಲತೆ) (ಶೇ.92.48),, ಮಲ್ಲವ್ವ ಮುಶಿಗೇರಿ (ಅಲ್ಪದೃಷ್ಟಿದೋಷ) (ಶೇ72.96), ಇಂದುಮತಿ ಗಡೇದಗೌಡರ (ಅಲ್ಪದೃಷ್ಟಿ ದೋಷ) (ಶೇ72.92), ಪ್ರಿಯಾಂಕ ಮಾದರ (ಬಹುವಿಕಲತೆ) (ಶೇ65.48) ಸಿಹಿ ಹಂಚಿ, ಸನ್ಮಾನಿಸಲಾಯಿತು.

ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿ, ವಿಕಲಚೇತನ ಮಕ್ಕಳಿಗೆ ಹಲವಾರು ಸೌಲಭ್ಯಗಳಿರುವುದಾಗಿ ಮಾಹಿತಿ ನೀಡಿದರು. ವೇದಿಕೆ ಮೇಲೆ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್.ಹಳಗೇರಿ, ಪಪೂ ಕಾಲೇಜಿನ ಪ್ರಾಚಾರ್ಯ



ಗುಳೇದಗುಡ್ಡ ಪಟ್ಟಣದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

ಎಸ್.ಬಿ.ಮಡಿವಾಳರ, ಸ್ಥಳೀಯ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಉಪಪ್ರಾಚಾರ್ಯ ಎಂ.ಪಿ.ಮಾಗಿ, ಗುಳೇದಗುಡ್ಡ ಭಾಗದ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷ ಎಚ್.ಕೆ.ಗುಡೂರ ಉಪಸ್ಥಿತರಿದ್ದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಸ್.ಎಸ್.ಯಲಿಗಾರ ನಿರೂಪಿಸಿದರು. ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿ ಎನ್.ಡಿ.ಬೀಳಗಿ, ಎಸ್.ಎಸ್. ಚೌಕದ, ಎಚ್.ಆರ್.ಕಡಿವಾಲ, ವಿ.ಎಚ್. ಮಡಿವಾಳರ, ಸಮೂಹ ಸಂಪನ್ಮೂಲ ವ್ಯಕ್ತಿ ಜಗದೀಶ ಬುಳ್ಳಾ ಸೇರಿದಂತೆ ಪಾಲಕರು, ವಿಕಲಚೇತನ ಮಕ್ಕಳು ಹಾಜರಿದ್ದರು.

ನಾಟಕಗಳು ನೀತಿ ಸಾರ ಬಿಂಬಿಸುವ ರೂಪಕಗಳು



• **ಕನ್ನಡಪ್ರಭ ವಾರ್ತೆ** ಕೆರೂರ

ಚಿಕ್ಕಂದಿನಿಂದಲೇ ನಾಟಕದ ಗೀಳು ಅಂಟಿಸಿಕೊಂಡ ಚಿಕ್ಕ ಗ್ರಾಮ ಹೊಸಕೋಟಿಯ ಗೋಪಾಲ ನಾಯ್ಕ ತನ್ನದೆ ಸಂಘ ಕಟ್ಟಿಕೊಂಡು ಗ್ರಾಮೀಣ ಪ್ರದೇಶಗಳಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತ ಬಂದಿರುವ ಹೆಮ್ಮೆಯ ರಂಗಭೂಮಿ ಕಲಾವಿದ ಎಂದು ಹೊಸಕೋಟಿ ಗ್ರಾಮದ ಮುಖಂಡರಾದ ಅಶೋಕ ಸಾಲಿ ಹಾಗೂ ಗಂಗಯ್ಯ ಹಿರೇಮಠ ಹೇಳಿದರು.
ಮಾರುತೇಶ್ವರ ಪರಿಶಿಷ್ಟ ಪಂಗಡ ಸಾಂಸ್ಕೃತಿಕ ಕಲಾ ಅಭಿವೃದ್ಧಿ ಸಂಘ (ರಿ)ಹೊಸಕೋಟೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಬಾಗಲಕೋಟೆ ಸಹಯೋಗದಲ್ಲಿ 2026ನೇ ಸಾಲಿನ ಗಿರಿಜನ ಉಪ ಯೋಜನೆ ಅಡಿಯಲ್ಲಿ ರಂಗಭೂಮಿ ಕಲಾವಿದರಾದ ಮಂಜುನಾಥ ಮತ್ತಿಕಟ್ಟಿ ಗುಬ್ಬೇರಕೊಪ್ಪ ಹಾಗೂ ಸಂಗಡಿಗರಿಂದ ಜಂಗವಾಡ ಗ್ರಾಮದ ಬಯಲು ರಂಗಮಂದಿರದಲ್ಲಿ ಸಾವಿರ ಹಳ್ಳಿ ಸರದಾರ ನಾಟಕ ಪ್ರದರ್ಶನದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಾಟಕಗಳು ಸಮಾಜದ ಅಂಕು ಡೊಂಕುಗಳನ್ನುತಿದ್ದಿ ನೀತಿ ಸಾರವನ್ನು ಬಿಂಬಿಸುವ ರೂಪಕಗಳು ಗೋಪಾಲ ನಾಯ್ಕ ಅವರಸಂಘಉತ್ತರೋತ್ತರಅಭಿವೃದ್ಧಿಹೊಂದಲೆಂದುಹಾರೈಸಿದರು. ಕಾರ್ಯಕ್ರಮದಲ್ಲಿ ಗಣ್ಯರಾದ ರಾಮಣ್ಣ ನಿಂಬರಗಿ, ಮಧುಕರ ಕುಲಕರ್ಣಿ, ಎಸ್.ಎಂ.ಗೊಣ್ಣಾಗರ, ಎಂ.ಟಿ.ಅಮಾತಿ, ಗೋಪಾಲ ನಾಯ್ಕರ, ವೀರಭದ್ರಯ್ಯ ಸಾಲಿಮಠ, ರವಿ ಮಾಳವಾಡ, ಜಗದೀಶ ಗಾಣಿಗೇರ, ಪವನ ಹುಲಕುಂದ, ಪ್ರವೀಣ ಗೋನಾಗರ ಮೊದಲಾದವರಿದ್ದರು.

> ದುಂದುವೆಚ್ಚದ ಮದುವೆಗಳು ಬಡವರಿಗೆ ಆರ್ಥಿಕ ಹೊರೆಯಾಗುತ್ತಿರುವ ಈ ಕಾಲದಲ್ಲಿ, ಸಾಮೂಹಿಕ ವಿವಾಹಗಳು ಬಡ ಕುಟುಂಬಗಳ ಆರ್ಥಿಕ ಪ್ರಗತಿಗೆ ಪೂರಕವಾಗಿವೆ
> • **ಜಗದೀಶ ಗುಡಗುಂಟಿ** ಶಾಸಕ

ಸುದ್ದಿ ಸಿಂಚನ

ವಿಜ್ಞಾನ ಬೇಸಿಗೆ ಶಿಬಿರ: ಮಕ್ಕಳ ಜ್ಞಾನ ದಾಹಕ್ಕೆ ಸಾಕ್ಷಿ



ಗುಳೇದಗುಡ್ಡ: ತಾಲೂಕಿನ ಪರ್ವತಿ ಗ್ರಾಮದ ಸರ್ಕಾರಿ ಪ್ರೌಢಶಾಲೆ (ಆರ್‌ಎಂಎಸ್‌ಎ) ಹಾಗೂ ಬಾಗಲಕೋಟೆಯ ಅಗಸ್ತ್ಯ ವಿಜ್ಞಾನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಬೇಸಿಗೆ ಶಿಬಿರ ಕಾರ್ಯಕ್ರಮವು ಇತ್ತೀಚೆಗೆ ಅತ್ಯಂತ ಯಶಸ್ವಿಯಾಗಿ ಜರುಗಿತು. ರಜೆಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಈ ಶಿಬಿರವು ವಿಶೇಷವಾಗಿತ್ತು.
ಈ ಸಂದರ್ಭದಲ್ಲಿ ಬದಾಮಿ ತಾಲೂಕಿನ ಕ್ಷೇತ್ರ ಸಮನ್ವಯ ಅಧಿಕಾರಿ ಎಂ.ಬಿ.ದೊಡ್ಡಪ್ಪನವರ ಬುಧವಾರ ಶಿಬಿರಕ್ಕೆ ಭೇಟಿ ನೀಡಿ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ವೀಕ್ಷಿಸಿದರು. ನಂತರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಬೇಸಿಗೆ ರಜೆಯಲ್ಲಿ ಮಕ್ಕಳು ಕೇವಲ ಆಟಕ್ಕೆ ಸೀಮಿತವಾಗದೇ ಇಂತಹ ಜ್ಞಾನವರ್ಧಕ ಶಿಬಿರಗಳಲ್ಲಿ ಪಾಲ್ಗೊಳ್ಳಬೇಕು. ಇದು ಅವರಲ್ಲಿ ತರ್ಕಬದ್ಧ ಆಲೋಚನೆ ಮತ್ತು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಲು ಉತ್ತಮ ಅವಕಾಶವಾಗಿದೆ ಎಂದು ಶ್ಲಾಘಿಸಿದರು.
ಅಗಸ್ತ್ಯ ವಿಜ್ಞಾನ ಕೇಂದ್ರದ ಸಂಪನ್ಮೂಲ ವ್ಯಕ್ತಿ ರವಿಕಿರಣ ಹಡಪದ ಅವರು ವಿದ್ಯಾರ್ಥಿಗಳಿಗೆ ಸರಳ ವಿಜ್ಞಾನ ಪ್ರಯೋಗಗಳನ್ನು ಪ್ರಾಯೋಗಿಕವಾಗಿ ವಿವರಿಸಿದರು. ಇದರೊಂದಿಗೆ ಶಾಲಾ ಕೊಠಡಿಯ ಫಲಕದ ಮೇಲೆ ಬರೆದಿದ್ದ ಸಂವಿಧಾನಾತ್ಮಕ ಹುದ್ದೆಗಳಾದ ಶಾಸಕರು, ಸಂಸದರು, ಮುಖ್ಯಮಂತ್ರಿ, ಪ್ರಧಾನಮಂತ್ರಿ ಗಳ ಕಾರ್ಯವೈಖರಿಯ ಬಗ್ಗೆಯೂ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಮಾಹಿತಿ ನೀಡಿದರು.
ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯ ಎಚ್.ಕೆ.ಗುಡೂರ ಅವರು ಶಿಬಿರದ ಚಟುವಟಿಕೆಗಳಿಗೆ ಅಗತ್ಯ ಮಾರ್ಗದರ್ಶನ ನೀಡಿದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಸಂಗಮೇಶ ಯಲಿಗಾರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿ ಜಗದೀಶ ಬುಳ್ಳಾ ಅವರು ಅತಿಥಿಗಳಾಗಿ ಭಾಗವಹಿಸಿ, ಶಿಕ್ಷಣ ಇಲಾಖೆಯ ವತಿಯಿಂದ ಶಿಬಿರದ ಯಶಸ್ಸನ್ನು ಅವಲೋಕಿಸಿದರು. ಶಿಬಿರದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಹೊಸ ವಿಚಾರಗಳನ್ನು ಕಲಿಯುವ ಸಂಭ್ರಮದಲ್ಲಿದ್ದರು. ಶಾಲಾ ಸಿಬ್ಬಂದಿ ಹಾಗೂ ಪೋಷಕರು ಈ ರಚನಾತ್ಮಕ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು

ವಿಮೆ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ: ಜಿಲ್ಲಾಧಿಕಾರಿ ಸೂಚನೆ

ಜಿಲ್ಲಾಮಟ್ಟ ತಾಂತ್ರಿಕ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಸೂಚನೆ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ



ಅನಾನುಕೂಲಕರ ಹವಾಮಾನದಿಂದ ಉಂಟಾಗುವ ಬೆಳೆ ನಷ್ಟದಿಂದ ರೈತರನ್ನು ರಕ್ಷಿಸುವ ಉದ್ದೇಶದಿಂದ ಜಾರಿಗೆ ತರಲಾದ ಹವಾಮಾನ ಆಧಾರಿತ ವಿಮೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ವಿಮೆ ಯೋಜನೆ ಕುರಿತು ಜರುಗಿದ ಜಿಲ್ಲಾಮಟ್ಟ ತಾಂತ್ರಿಕ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹವಾಮಾನ ಆಧಾರಿತ ವಿಮೆ ಯೋಜನೆಯ ಮರು ವಿನ್ಯಾಸದ ಪ್ರಮುಖ ಅಂಶಗಳನ್ನು ವಿವರವಾಗಿ ಚರ್ಚಿಸಿದರು. ಇದು ಮಳೆ ತಾಪಮಾನ ಮತ್ತು ತೇವಾಂಶದಂತಹ ಪ್ರತಿಕೂಲ ಹವಾಮಾನ ವೈಪರಿತ್ಯಗಳಿಂದ ಉಂಟಾಗುವ ತೋಟಗಾರಿಕೆ ಮತ್ತು ವಾಣಿಜ್ಯ ಬೆಳೆಗಳಾದ ದಾಳಿಂಬೆ ಮತ್ತು ದ್ರಾಕ್ಷಿ ಬೆಳೆ ನಷ್ಟಕ್ಕೆ ಪರಿಹಾರ ಒದಗಿಸುವ ಯೋಜನೆಯಾಗಿದೆ ಎಂದು ತಿಳಿಸಿದರು.

> **ಎಲ್ಲ ಇಲಾಖೆಗಳು ಸಮನ್ವಯದಿಂದ ಯೋಜನೆಯ ಲಾಭ ರೈತರಿಗೆ ಮುಟ್ಟಲಿ**

ಈ ಯೋಜನೆಯಡಿ ಮುಖ್ಯವಾಗಿ ಬೆಳೆ ಕಟಾವು ಪರಿಶೀಲನೆಗೆ ಬದಲಾಗಿ ಹವಾಮಾನ ಕೇಂದ್ರಗಳ ದತ್ತಾಂಶಗಳ ಆಧರಿಸಿ ಪರಿಹಾರ ನೀಡಲಾಗುತ್ತದೆ. ಅಲ್ಲದೇ ಬೆಳೆ ಬೆಳವಣಿಗೆಯ ಹಂತಗಳನ್ನು ಗಮನಿಸಿ ವಿಮಾ ಮೊತ್ತ ನಿಗದಿಪಡಿಸಲಾಗುತ್ತದೆ. ಹವಾಮಾನ ಸೂಚ್ಯಂಕಗಳ ಆಧಾರದ ಮೇಲೆ ಸ್ವಯಂ ಚಾಲಿತವಾಗಿ ಪರಿಹಾರ ಬಿಡುಗಡೆ ಮಾಡಲಾಗುತ್ತದೆ. ಬೆಳೆ ಹಾನಿಯ ಸಂದರ್ಭದಲ್ಲಿ ನೇರ ವಿಮಾ ಪಾವತಿಯನ್ನು ಬೆಳೆ ಸಾಲ ಪಡೆದ ಮತ್ತು ಸಾಲ ಪಡೆಯದ ರೈತರಿಗೆ ಒದಗಿಸಲಾಗುತ್ತದೆ. ಈ ಯೋಜನೆ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆ ಜೊತೆ ಜಾರಿಯಲ್ಲಿರುತ್ತದೆ ಎಂದರು. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಹವಾಮಾನ ವೈಪರಿತ್ಯಗಳಿಂದ ರೈತರಿಗೆ ಆಗುವ ನಷ್ಟವನ್ನು ತಗ್ಗಿಸಲು ಈ ಯೋಜನೆ ಸಹಾಯಕವಾಗಿದ್ದು, ಇದರ ಬಗ್ಗೆ ರೈತರಲ್ಲಿ ಹೆಚ್ಚಿನ ತಿಳುವಳಿಕೆ ನೀಡುವ ಕೆಲಸವಾಗಬೇಕು ಎಂದು ತಿಳಿಸಿದರು.

ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಯೋಜನೆಯ ಲಾಭ ರೈತರಿಗೆ ಮುಟ್ಟಿಸುವ ಕೆಲಸವಾಗಬೇಕು. ರೈತರು ಈ ಯೋಜನೆಯ ಬಗ್ಗೆ ತಾಲೂಕು ಮತ್ತು ಹೋಬಳಿ ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದರು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ರಾಜಕುಮಾರ ಹೂಗಾರ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಗೌರಮ್ಮ ಸುಂಕದ ಸೇರಿದಂತೆ ತೋಟಗಾರಿಕೆ ವಿವಿಯ ಸಂಶೋಧನಾ ನಿರ್ದೇಶಕರು, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು, ಎಲ್ಲ ತಾಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ವಿಮಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಗ್ರಾಮೀಣ ಕುಡಿಯುವ ನೀರು: ಸಹಾಯವಾಣಿ ಕೇಂದ್ರ ಸ್ಥಾಪನೆ

ಬಾಗಲಕೋಟೆ: ಪ್ರಸಕ್ತ ಬೇಸಿಗೆ ಕಾಲದಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪಂಚಾಯತಿ ವತಿಯಿಂದ ಅಗತ್ಯಕ್ಕೆ ತಕ್ಕಂತೆ ಎಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಕಾಲದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗ್ರಾಮಸ್ಥರಿಗೆ ಶೀಘ್ರವಾಗಿ ಸ್ಪಂಧಿಸಲು ಮತ್ತು ಕುಂದುಕೊರತೆಗಳನ್ನು ಪರಿಹರಿಸಲು ಜಿಲ್ಲಾ ಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಗ್ರಾಮೀಣ ಭಾಗದ ಜನರು ತಮ್ಮ ಗ್ರಾಮದಲ್ಲಿ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ ಕಂಡುಬರುವ ತೊಂದರೆಗಳನ್ನು ಈ ಕೆಳಕಂಡ ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಕುಂದುಕೊರತೆಗಳನ್ನು ದಾಖಲಿಸಬಹುದಾಗಿದೆ. ಜಿಪಂ ಕಾರ್ಯಾಲಯ (ದೂ.08354-200180), ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ (ಮೊ.9482273638), ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ ಉಪವಿಭಾಗ ಕಚೇರಿ ಬಾಗಲಕೋಟೆ (ಮೊ.9916889472), ಬಾದಾಮಿ ಮತ್ತು ಗುಳೇದಗುಡ್ಡ (ಮೊ.9480031005), ಬೀಳಗಿ (ಮೊ.9902436899), ಹುನಗುಂದ ಮತ್ತು ಇಳಕಲ್ಲ (ಮೊ.9448947542), ಜಮಖಂಡಿ ಮತ್ತು ರಬಕವಿ-ಬನಹಟ್ಟಿ (ಮೊ.9380509080), ಮುಧೋಳ (ಮೊ.9591421346) ಕರೆ ಮಾಡಬಹುದಾಗಿದೆ. ಸಹಾಯವಾಣಿ ಕೇಂದ್ರಗಳಲ್ಲಿ ದಾಖಲಾಗುವ ದೂರುಗಳಿಗೆ ಸಮಸ್ಯೆ ನಿವಾರಣೆಗೆ ತುರ್ತಾಗಿ ಅಗತ್ಯ ಪರಿಹಾರ ಕ್ರಮಗಳನ್ನು ಅನುಸರಿಸಲಾಗುತ್ತದೆ. ಆದ್ದರಿಂದ ಬಾಗಲಕೋಟೆ ಜಿಲ್ಲೆಯ ಗ್ರಾಮೀಣ ಭಾಗದ ಜನರು ಸಹಾಯವಾಣಿ ಕೇಂದ್ರಗಳ ಸದುಪಯೋಗ ಪಡಿಸಿಕೊಳ್ಳುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮೂಹಿಕ ವಿವಾಹ ಆರ್ಥಿಕ ಪ್ರಗತಿಗೆ ಪೂರಕ

ಸಾಮೂಹಿಕ ವಿವಾಹದಲ್ಲಿ ಜಗದೀಶ ಗುಡಗುಂಟಿ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಜಮಖಂಡಿ



ದುಂದುವೆಚ್ಚದ ಮದುವೆಗಳು ಬಡವರಿಗೆ ಆರ್ಥಿಕ ಹೊರೆಯಾಗುತ್ತಿರುವ ಈ ಕಾಲದಲ್ಲಿ, ಸಾಮೂಹಿಕ ವಿವಾಹಗಳು ಬಡ ಕುಟುಂಬಗಳ ಆರ್ಥಿಕ ಪ್ರಗತಿಗೆ ಪೂರಕವಾಗಿವೆ ಎಂದು ಶಾಸಕ ನಾಡೋಜ ಜಗದೀಶ ಗುಡಗುಂಟಿ ಹೇಳಿದರು.

ನಗರದ ಬಸವ ಭವನದಲ್ಲಿ ಮಂಗಳವಾರ ಬೋಧಿಸತ್ವ ಗೌತಮಬುದ್ಧ ನಗರ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ಆಯೋಜಿಸಿದ್ದ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಘಟನೆಯವರು ಸಾಮೂಹಿಕ ವಿವಾಹದ ಮೂಲಕ ಬಡವರಿಗೆ ನೆರವಾಗಿರುವುದು ಶ್ಲಾಘನೀಯ ಕಾರ್ಯ ಎಂದರು.

ಮಾಜಿ ಉಪಾಧ್ಯಕ್ಷ ಸುಶೀಲಕುಮಾರ ಬೆಳಗಲಿ ಮಾತನಾಡಿ, ಸಾಮೂಹಿಕ ವಿವಾಹದಲ್ಲಿ ಮದುವೆಯಾಗುವುದರಿಂದ ಘನತೆಗೆ ಯಾವುದೇ ಕುಂದುಂಟಾಗುವುದಿಲ್ಲ. ವಿವಾಹಕ್ಕೆ ವ್ಯಯಿಸುವ ಹಣವನ್ನು ದಂಪತಿಗಳು ತಮ್ಮ ಆರ್ಥಿಕ ಏಳಿಗೆಗೆ ಬಳಸಿಕೊಳ್ಳಬೇಕು ಮತ್ತು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಸಂಘದ ಅಧ್ಯಕ್ಷ ಪರಶುರಾಮ ಕಾಂಬಳೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿ ವರ್ಷ ಇದೇ ದಿನದಂದು ಸಾಮೂಹಿಕ ವಿವಾಹವನ್ನು ಏರ್ಪಡಿಸುವ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ನೇರ್ಲಿಯ ಜ್ಞಾನಜ್ಯೋತಿ ಬಂತೇಜಿ, ಬಾಗಲಕೋಟೆಯ ಧಮ್ಮಪಾಲ ಬಂತೇಜಿ 12 ಜೋಡಿಗಳಿಗೆ ವಿವಾಹ ಕಾರ್ಯಕ್ರಮ ನೆರವೇರಿಸಿದರು. ಮರೇಗುದ್ದಿಯ ವಿಜಯ ಮಹಾಂತೇಶ್ವರ ಸ್ವಾಮೀಜಿ, ಹಿಪ್ಪರಗಿ ಸಂಗಮೇಶ್ವರ ಮಠದ ಪ್ರಭುಜಿ ಬೆನ್ನಾಳೆ ಹಾರಾಜರು ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ಏಗಪ್ಪ ಸವದಿ, ಎ.ಪಿ.ಕುಲಕರ್ಣಿ, ರವಿ ಯಡಹಳ್ಳಿ, ಡಾ. ಎ.ಆರ್.ಬೆಳಗಲಿ, ಶಶಿಕಾಂತ ದೊಡ್ಡಮನಿ, ಅಶೋಕ ನಾರಾಯಣಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುತ್ತಣ್ಣ ಹಿಪ್ಪರಗಿ, ಅಲ್ತಾಫ್ ಸಗರ, ನಾಗಪ್ಪ ಸನದಿ, ರವಿ ಬಬಲೇಶ್ವರ, ಬಸವರಾಜ ಹಳ್ಳದಮನಿ, ಅಬ್ದುಲ ಜಮಾದಾರ, ಯಾಸೀನ ಲೋದಿ, ರವಿ ಕಾಂಬಳೆ ಇತರರು ಇದ್ದರು. ಬಸವರಾಜ ದೊಡ್ಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮೆಟಗುಡ್ಡ ಹೇಮ-ವೇಮ ಪ್ರೌಢಶಾಲೆಗೆ ಶೇ.100 ರಷ್ಟು ಫಲಿತಾಂಶ



ಮುಧೋಳ: ತಾಲೂಕಿನ ಮೆಟಗುಡ್ಡ ಗ್ರಾಮದ ಹೇಮ-ವೇಮ ಪ್ರೌಢಶಾಲೆಯ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಶೇ.100ರಷ್ಟು ಸಾಧನೆ ಮಾಡಿರುತ್ತದೆ. ಲಕ್ಷ್ಮೀ ಮಾನೊಮ್ಮಿ (ಶೇ.94.88), ಶ್ರೇಯಾ ಕಟ್ಟಿ (ಶೇ.92.80), ಉಷಾಭೀ. ದಳವಾಯಿ (ಶೇ.91.68), ಮುಕ್ತಾಬಾಯಿ ಅಪ್ಪನ್ನವರ (ಶೇ.91.68) ವಿದ್ಯಾರ್ಥಿಗಳು ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿರುವದಕ್ಕೆ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಮೆಟಗುಡ್ಡ ಗ್ರಾಮದ ಸ್ಥಳೀಯ ಆಡಳಿತ ಮಂಡಳಿಯವರು ಮತ್ತು ಶಾಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿ ಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಸಂಸ್ಕೃತಿ ಉಳಿಸಿ ಬೆಳೆಸುವುದು ಇಂದಿನ ಅಗತ್ಯ: ಡಾ.ವೆಂಕಟೇಶ

• **ಕನ್ನಡಪ್ರಭ ವಾರ್ತೆ** ಮುಧೋಳ



ಆಧುನಿಕ ತಂತ್ರಜ್ಞಾನದ ಹಾವಳಿಯಲ್ಲಿ ಹಳೆಯ ಸಂಪ್ರದಾಯ ಹಾಗೂ ಸಂಸ್ಕೃತಿಗಳು ಮಾಸುತ್ತಿರುವ ಇಂದಿನ ದಿನಗಳಲ್ಲಿ, ಆಧ್ಯಾತ್ಮಿಕ ನಾಟಕಗಳ ಮೂಲಕ ಜನರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುತ್ತಿರುವುದು ಶ್ಲಾಘನೀಯ ಸಂಗತಿ ಎಂದು ಡಾ.ವೆಂಕಟೇಶ ಗುಡೆಪ್ಪನವರ ಹೇಳಿದರು.

ತಾಲೂಕಿನ ಉತ್ತೂರ ಗ್ರಾಮದ ಶ್ರೀ ಬಸವೇಶ್ವರ ಮಹಾರಾಥೋತ್ಸವ, ಶ್ರೀ ಮಾರುತೇಶ್ವರ ಓಕುಳಿ ಹಾಗೂ ಗ್ರಾಮದೇವತೆಯ ಭಂಡಾರ ಜಾತ್ರೆ ನಿಮಿತ್ತ ಇತ್ತೀಚೆಗೆ ಗದಗದ ಪಂಡಿತ ಪಂಚಾಕ್ಷರ ಗವಾಯಿಗಳ ನಾಟ್ಯ ಸಂಘದಿಂದ ವತಿಯಿಂದ ಆಯೋಜಿಸಿದ್ದ 'ಅಜಾತ ನಾಗಲಿಂಗ' ನಾಟಕ ಉದ್ಘಾಟನೆ ಹಾಗೂ ಪ್ರತಿಭಾಪುರಸ್ಕಾರಸಮಾರಂಭದಲ್ಲಿಮಾತನಾಡಿದರು. ಅಶ್ಲೀಲ ಜಾನಪದ ಗೀತೆಗಳ ನಡುವೆಯೂ ಸಂಪ್ರದಾಯಬದ್ಧ ನಾಟಕ ಪ್ರದರ್ಶಿಸುವ ಮೂಲಕ ನಮ್ಮ ಶ್ರೀಮಂತ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಕಾಂಗ್ರೆಸ್ ಮುಖಂಡ ಶಂಕರ ಬಿ. ತಿಮ್ಮಾಪುರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಳೆ ಸಂಪ್ರದಾಯ ಹಾಗೂ ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಜಾತ್ರೆ ಮತ್ತು ನಾಟಕಗಳು ಪೂರಕವಾಗಿವೆ. ಆಧುನಿಕ ತಂತ್ರಜ್ಞಾನದ ನಡುವೆಯೂ ಗ್ರಾಮದಲ್ಲಿ ಅಜಾತ ನಾಗಲಿಂಗ ಸ್ವಾಮೀಜಿಗಳ ಅಧ್ಯಾತ್ಮಿಕ ನಾಟಕ ಪ್ರದರ್ಶಿಸುತ್ತಿರುವುದು ಸಂತೋಷದ ವಿಷಯ ಎಂದರು.

ಅಜಿತಗೌಡ ಪಾಟೀಲ್ ಮಾತನಾಡಿದರು. ಗ್ರಾಮದ ಶ್ರೀ ಶೇಖರಯ್ಯ ಮಹಾಸ್ವಾಮಿಜಿ, ಶಾಂತವೀರಯ್ಯ ಮಹಾಸ್ವಾಮಿಜಿ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಸಮಾರಂಭದಲ್ಲಿ ಸತ್ಯಪ್ಪ ರಾಮಪ್ಪ ಕಾತರಕಿ, ಪಿಡಿಒ ಹನುಮಂತ ಭಜಂತ್ರಿ, ಮಾರುತಿ ಶಿಂಗಾಡಿ, ಮಲ್ಲು ಗಾಣಗಿ, ರಾಮಜಿ ಘಾಟಗೆ, ಜಯಸಿಂಗ್ ಬೋಸ್ಲೆ, ವಿಠ್ಠಲ್ ಇಮ್ಮಡಿ, ಬಸು ಬಡಿಗೇರ, ಕಾಳಪ್ಪ ಬಡಿಗೇರ, ದೀಪುಗೌಡ ಪಾಟೀಲ, ರಾಚಪ್ಪ ಮಳಲಿ, ಧೋಂಡಿಬಾ ಘಾಟಗೆ, ಧರೆಪ್ಪ ಗಾಣಗಿ, ಸುಭಾಷ ಬಂಡಿವಡ್ಡರ, ಮಂಜುನಾಥ ನಿಂಬಾಳಕರ ಸೇರಿದಂತೆ ಇತರರಿದ್ದರು.

ದ್ಯಾಮದೇವಿ, ಕೋಟೆಮ್ಮದೇವಿ ಜಾತ್ರೆ

• **ಕನ್ನಡಪ್ರಭ ವಾರ್ತೆ** ಲೋಕಾಪುರ

ಉಘೇ ಉಘೇ ಗ್ರಾಮದೇವಿ ಎಂಬ ಸಹಸ್ರಾರು ಭಕ್ತರ ಜಯಘೋಷಗಳ ಮಧ್ಯೆ ಸುಮಾರು 7 ವರ್ಷಗಳ ಬಳಿಕ ಸಮೀಪದ ಚಿತ್ರಭಾನುಕೋಟಿ ಗ್ರಾಮದಲ್ಲಿ ನಡೆಯುತ್ತಿರುವ ಐದು ದಿನಗಳ ಐತಿಹಾಸಿಕ ದ್ಯಾಮದೇವಿ ಮತ್ತು ಕೋಟೆಮ್ಮದೇವಿ ಜಾತ್ರೆಯಲ್ಲಿ ಸಾವಿರಾರು ಭಕ್ತರು ಭಂಡಾರ ಹಾರಿಸಿ ಭಕ್ತಿಭಾವ ಮೆರೆದು ಬುಧವಾರ ಅದ್ದೂರಿ ತೆರೆ ಕಂಡಿತು.



ಜಾತ್ರೆ ಕಳೆ ಗ್ರಾಮೀಣ ಪ್ರದೇಶದಲ್ಲಿ ಅದ್ದೂರಿಯಾಗಿ ಜಾತ್ರೆ ನಡೆಯಿತು. ಉಧೋ ಉಧೋ ಉಧೋ ಎಂಬ ಭಕ್ತರ ಜಯಘೋಷ ಮುಗಿಲು ಮುಟ್ಟಿತು. ಭಂಡಾರ ಜಾತ್ರೆ ಎಂದು ಪ್ರಸಿದ್ಧಿ ಪಡೆದ ದುರ್ಗಾದೇವಿ ಜಾತ್ರೆಯಲ್ಲಿ ಸಾವಿರಾರು ಭಕ್ತರು ಭಂಡಾರ ಹಾರಿಸುವ ಮೂಲಕ ಭಕ್ತಿಯಲ್ಲಿ ಮಿಂದಿದ್ದು ಭಕ್ತಿ ಪರವಸರಾದರು. ಜಾತ್ರೆಯ ನಿಮಿತ್ತ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ನವಚಂಡಿ ಹೋಮ ಗಾನಯೋಗಿ ನಾಟ್ಯ ಸಂಘ ಹೆಬ್ಬಾಳ ಇವರಿಂದ ಮೂರುದಿನದ ಸಂತೆ ಎಂಬ ಸುಂದರ ಸಾಮಾಜಿಕ ನಾಟಕ ಜರುಗಿತು. ಡೊಳ್ಳು ಹಾಗೂ ವಿವಿಧ ವಾದ್ಯಗಳೊಂದಿಗೆ ಗ್ರಾಮದೇವಿಯ ಭವ್ಯ ಮೆರವಣಿಗೆ ಯುವಕರಿಂದ ಡಿಜೆ ಕಾಯಕ್ರಮ ಜರುಗಿತು. ಕುದುರೆ ಸೊಗು ಎಲ್ಲರ ಗಮನಸೆಳೆಯಿತು. ಅಮ್ಮನ ಉಡಿ ತುಂಬುವ ಕಾರ್ಯಕ್ರಮ ಕೊಟೆಮ್ಮದೇವಿ ನಾಟ್ಯ ಸಂಘದಿಂದ ದಿಲ್ಲಿ ಹೊಕ್ಕ ಪುಂಡ ಹುಲಿ ಎಂಬ ಸುಂದರ ಸಾಮಾಜಿಕ ರೌದ್ರಮ್ಮೆಯ ನಾಟಕ ಭವ್ಯವಾಗಿ ಪ್ರದರ್ಶನಗೊಂಡಿತು. ಜಾತ್ರೆಗೆ ಆಗಮಿಸಿದ ಭಕ್ತರು ದೇವಿ ದರ್ಶನ ಪಡೆದು ಪುನೀತರಾದರು. ಈ ಎಲ್ಲ ಕಾರ್ಯಕ್ರಮಗಳು ಗ್ರಾಮಸ್ಥರ ಸಹಕಾರದಿಂದ ಯಶಸ್ವಿಗೊಳಿಸಿ ಜಾತ್ರೆಯನ್ನು ಅದ್ದೂರಿಯಾಗಿ ಜರುಗಿತು. ಜಾತ್ರೆಗೆ ಸಹಕರಿಸಿದ ಎಲ್ಲ ಗ್ರಾಮದ ಹಿರಿಯರಿಗೆ, ಯುವಕರಿಗೆ, ಮಹಿಳಾ ಸಂಘಟನೆಗಳಿಗೆ ವಿವಿಧ ಗ್ರಾಮದಿಂದ ಬಂದ ಭಕ್ತರಿಗೆ ಗ್ರಾಮಸ್ಥರ ಪರವಾಗಿ ಜಾತ್ರಾ ಕಮಿಟಿ ಅಭಿನಂದನೆ ಸಲ್ಲಿಸಿದ್ದಾರೆ.

ಹವಾಮಾನ ಬದಲಾವಣೆ: ರೈತರಿಗೆ ತರಬೇತಿ

ಬಾಗಲಕೋಟೆ: ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ರೈತರ ಅನುಕೂಲಕ್ಕಾಗಿ ಮೇ 7 ರಂದು ಬೆಳಗ್ಗೆ 11.30 ರಿಂದ 12.30 ವರೆಗೆ ಗೂಗಲ್ ಮೀಟ್ ಮೂಲಕ ಹವಾಮಾನ ಬದಲಾವಣೆ ಹಾಗೂ ಕೃಷಿಯ ಮೇಲೆ ಅದರ ಪರಿಣಾಮ ಕುರಿತು ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ರೈತರು ಗೂಗಲ್ ಮೀಟ್ ಲಿಂಕ್ ಮೂಲಕ ತರಬೇತಿಗೆ ಹಾಜರಾಗಿ ತರಬೇತಿಯ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕೃಷಿ ಸಹಾಯಕರು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಕರ್ನಾಟಕದಲ್ಲಿ ವಾಸಿಸುವರೆಲ್ಲರೂ ಕಡ್ಡಾಯವಾಗಿ ಕನ್ನಡ ಮಾತನಾಡಲೇ ಬೇಕು.
● ಡಾ.ಎಂ.ಬಿ.ಒಂಟಿ
ಹಿರಿಯ ಸಾಹಿತಿ ಉಪನ್ಯಾಸಕ

ಕಡ್ಡಾಯವಾಗಿ ಕನ್ನಡ ಮಾತನಾಡಲೇ ಬೇಕು

ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಡಾ.ಎಂ.ಬಿ.ಒಂಟಿ ಅಭಿಪ್ರಾಯ

● **ಕನ್ನಡಪ್ರಭ ವಾರ್ತೆ** ಇಳಕಲ್ಲ

ಇಂದು ಕರ್ನಾಟಕದಲ್ಲಿ ವಾಸಿಸುವರೆಲ್ಲರೂ ಕಡ್ಡಾಯವಾಗಿ ಕನ್ನಡ ಮಾತನಾಡಲೇ ಬೇಕು ಎಂದು ಹಿರಿಯ ಸಾಹಿತಿ ಉಪನ್ಯಾಸಕ ಡಾ. ಎಂ.ಬಿ.ಒಂಟಿ ಹೇಳಿದರು.

ನಗರದ ಸ್ನೇಹರಂಗ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಇಳಕಲ್ಲ ತಾಲೂಕು ಘಟಕ ಏರ್ಪಡಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ ವಿಶೇಷ ಉಪನ್ಯಾಸಕರಾಗಿ ಮಾತನಾಡಿದ ಅವರು, 350 ವರ್ಷ ಭಾರತ ದೇಶವನ್ನು ಆಳಿದ ಬ್ರಿಟಿಷರು ಭಾರತ ದೇಶವನ್ನು 22 ಭಾಗಗಳನ್ನಾಗಿ ಮಾಡಿ ಭಾರತ ದೇಶದಲ್ಲಿ ಒಗ್ಗಟ್ಟಾಗಿ ಇರಬಾರದೆಂದು ಮಾಡಿದರು. ಆದರಲ್ಲಿ ಅನೇಕ ಕನ್ನಡ ಭಾಷೇಯ ಪ್ರದೇಶಗಳು ಮಹಾರಾಷ್ಟ್ರ, ಆಂಧ್ರಪ್ರದೇಶ ಭಾಗ ಗಳಿಗೆ ಹೋಗಿ ಕನ್ನಡ ಭಾಷೆಯ ಈ ಪ್ರದೇಶ ಕಿರಿಯ ಭಾಗವಾಯಿತು. ಇನ್ನೂ ಕನ್ನಡ ಭಾಷೆಯ ಉಳವಿಗಾಗಿ 112 ವರ್ಷಗಳ ಹಿಂದೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೇಯರು ಈ ಕನ್ನಡ ಸಾಹಿತ್ಯ ಪರಿಷತ್ತನ್ನು ಹುಟ್ಟು ಹಾಕಿದರು. ಇದರ ಮೊದಲ ಅಧ್ಯಕ್ಷರಾಗಿ ಎಚ್.ವಿ.ನಂಜುಡಯ್ಯನವರು ನೇಮಕರಾಗಿ ಕನ್ನಡ ಭಾಷೆಯ ಉಳಿವಿಗಾಗಿ ದುಡಿದರು ಎಂದರು.

ನಮ್ಮ ಜಿಲ್ಲೆಯಾದ ಬಾಗಲಕೋಟೆ ವಿಶ್ವ ವಿದ್ಯಾಲಯದಲ್ಲಿ ಕನ್ನಡ ವಿಭಾಗ ಇರುವುದೇ ಇರುವುದು ನಮ್ಮ ದುರದೃಷ್ಟ. ಕರ್ನಾಟಕದಲ್ಲಿರುವ ಎಲ್ಲ ಶಾಲೆ ಕಾಲೇಜುಗಳಲ್ಲಿ ಕನ್ನಡ ಒಂದು ಭಾಷೆ ಕಡ್ಡಾಯವಾಗಿ ಇರಬೇಕು ಎಂದರು.



ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಪ್ರೊ. ಕೆ.ಎ.ಬನ್ನಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿ ಕನ್ನಡ ಭಾಷೆಯ ಬಗ್ಗೆ ತಿಳಿಸಿ ಕನ್ನಡ ಭಾಷೆಯ ಉಳಿವಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಮಾಡಿದ ಕಾರ್ಯಗಳ ಬಗ್ಗೆ ತಿಳಿಸಿದರು.

ಈ ಸಂದರ್ಭದಲ್ಲಿ ಇಳಕಲ್ಲ ಸ್ನೇಹರಂಗ ಸಂಸ್ಥೆಯ ಅಧ್ಯಕ್ಷ ಬಸವರಾಜ ಮಠದ, ಉಪನ್ಯಾಕ ಪ್ರೊ.ಬಸವರಾಜ ನಾಡಗೌಡ, ಪ್ರೊ.ರಾಮನಗೌಡ ಸಂದಿಮನಿ, ಎಸ್.ಆರ್.ಕಂಠಿ, ಶಿಕ್ಷಣ ಮಹಾ ವಿದ್ಯಾಲಯದ ಚೇರಮನ್ ಕಿರಣ ಬಿಜ್ಜಲ, ಇಳಕಲ್ಲ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹಾದೇವ ಕಂಬಾಗಿ, ಡಾ.ವಿ.ಕೆ. ವಂಶಾಕೃತಮಠ, ಮಹಾಂತೇಶ ಗಜೇಂದ್ರಗಡ, ಸಯ್ಯದ ಸಿರಾಜ ಖಾಜಿ, ಜಾಕೀರ ಹುಸೇನ ಗಡೇದ, ಉಮೇಶ ಶಿರೂರ, ಕೆ.ಎಚ್. ಸೋಲ್ಲಾಪುರ, ಶ್ರೀದೇವಿ ಕರ್ಜಗಿ, ಗೋಪಿನಾಥ ಕಠಾರೆ, ಸಂಗಮೇಶ ಕಲಕುರ್ಕಿ, ಸಂಗಮೇಶ ಬಂಡರಗಲ್ಲ ಹಾಗೂ ಇತರರು ಉಪಸ್ಥಿತರಿದ್ದರು.

ಬೆಳಗಾವಿ ಉತ್ತರ ವಲಯ ಐಜೆಪಿಯಾಗಿ ಸಂದೀಪ್ ಪಾಟೀಲ ನೇಮಕ

ಬೆಳಗಾವಿ: ರಾಜ್ಯ ಸರ್ಕಾರ ಹಿರಿಯ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ ಅವರನ್ನು ಬೆಳಗಾವಿ ಉತ್ತರ ವಲಯದ ಇನ್ಸ್ಪೆಕ್ಟರ್‌ಜನರಲ್ ಆಫ್ ಪೊಲೀಸ್ (ಐಜಿಪಿ) ಆಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಇದಕ್ಕೂ ಮೊದಲು ಡಾ.ಚೇತನಸಿಂಗ್ ರಾಥೋಡ್ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರನ್ನು ಸಿಐಡಿ ವಿಭಾಗದ ಆರ್ಥಿಕ ಅಪರಾಧಗಳ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ಆ ಹುದ್ದೆ ಈವರೆಗೆ ಖಾಲಿಯಿತ್ತು. ಸಂದೀಪ್ ಪಾಟೀಲ ಅವರು ಈ ಹಿಂದೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಪಡೆಯ ಐಜಿಪಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಅದಕ್ಕೂ ಮೊದಲು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ(ಎಸ್‌ಪಿ) ಕಾರ್ಯನಿರ್ವಹಿಸಿದ್ದ ಅವರು ಜನಸ್ನೇಹಿ ಪೊಲೀಸ್ ವ್ಯವಸ್ಥೆ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದರು.



